# Kuvempu University Library

Jnana Sahyadri, Shankaraghatta

## News Paper Clipping Service from Digital Library

**Date: 12-02-2016**

| Sl. No. | Name of the Paper | No. of Clippings |
|---|---|---|
| **01** | Samyuktha Karnataka | **01** |
| **02** | Vijaya Karnataka | **02** |
| **03** | Vijayavani | **01** |
| **04** | Deccan Herald | **01** |

# ಆಸ್ತಿ ದಾನ ಬೇಡ ; ರಕ್ತ ದಾನ ಮಾಡಿ




ಶಂಕರಘಟ್ಟದ ಕುವೆಂಪು ವಿಶ್ವವಿದ್ಯಾನಿಲಯದ ಯುವ ರೆಡ್ ಕ್ರಾಸ್ ಘಟಕ ಆಯೋಜಿಸಿದ್ದ ರಕ್ತದಾನ ಶಿಬಿರದ ಉದ್ಘಾಟನಾ ಸಮಾರಂಭದಲ್ಲಿ ಡಾ. ಅಪ್ಪಣ್ಣ ಎಂ ಗಸ್ತಿ ಮಾತನಾಡಿದರು.

**ಶಿವಮೊಗ್ಗ**

ನೀವು ಸಂಪಾದಿಸಿರುವ ಆಸ್ತಿ, ಅಂತಸ್ತು ನಿಮ್ಮ ಬಳಿಯೇ ಇರಲಿ. ಆದರೆ ನಿಮ್ಮ ದೇಹದಲ್ಲಿ ನಶಿಸಿ ಹೋಗುವ ರಕ್ತವನ್ನು ದಾನ ಮಾಡುವ ಮೂಲಕ ಸಾವಿನಂಚಿನಲ್ಲಿರುವವರ ಪ್ರಾಣ ಉಳಿಸಿ ಎಂದು ಕುವೆಂಪು ವಿಶ್ವವಿದ್ಯಾನಿಲಯದ ಯುವ ರೆಡ್ ಕ್ರಾಸ್ ಘಟಕದ ಸಮನ್ವಯಾಧಿಕಾರಿ ಡಾ. ಅಪ್ಪಣ್ಣ ಎಂ ಗಸ್ತಿ ಹೇಳಿದರು.

ಶಂಕರಘಟ್ಟದ ಕುವೆಂಪು ವಿಶ್ವವಿದ್ಯಾನಿಲಯದ ಯುವ ರೆಡ್ ಕ್ರಾಸ್ ಘಟಕ ಆಯೋಜಿಸಿದ್ದ ರಕ್ತದಾನ ಶಿಬಿರದ ಉದ್ಘಾಟನಾ ಸಮಾರಂಭದ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ಸರ್ವಜ್ಞ ಅನ್ನದಾನಕ್ಕಿಂತ ಶ್ರೇಷ್ಠ ದಾನ ಮತ್ತೊಂದಿಲ್ಲ ಎಂದು ಆಗ ಹೇಳಿದ್ದಾರೆ, ಈಗ ಅದೇ ಮಾತನ್ನು ರಕ್ತದಾನಕ್ಕಿಂತ ಶ್ರೇಷ್ಠ ದಾನ ಮತ್ತೊಂದಿಲ್ಲವೆಂದು ಪ್ರಸ್ತುತ ಸಂದರ್ಭಕ್ಕೆ ಅನ್ವಯಿಸಿಕೊಳ್ಳಬೇಕು ಎಂದರು.

ವಿದ್ಯಾರ್ಥಿಗಳು ಪರೋಪಕಾರ ಭಾವನೆ ಬೆಳಸಿಕೊಳ್ಳಬೇಕು. ವಿದ್ಯಾರ್ಥಿಗಳು ರಕ್ತದಾನ ಮಾಡಿ ಅಪಘಾತಕ್ಕೆ ಒಳಗಾದ ಅಥವಾ ರಕ್ತ ಸಿಗದೇ ಪ್ರಾಣ ಕಳೆದುಕೊಳ್ಳುತ್ತಿರುವ ಬಡವರ ಬಾಳಿಗೆ ಬೆಳಕಾಗಬೇಕು. ನಿಮ್ಮಿಂದ ಸಾಂತ್ವನಕ್ಕೊಳಗಾದವರ ಹಾರೈಕೆಯಿಂದ ನಿಮ್ಮ ಬಾಳಿನಲ್ಲಿ ಸಂತೋಷ, ನೆಮ್ಮದಿ ಸಿಗುತ್ತದೆ ಎಂದರು. ರೆಡ್ ಕ್ರಾಸ್ ರಾಜ್ಯ ಪ್ರಶಸ್ತಿ ಪುರಸ್ಕೃತ ಧರಣೇಂದ್ರ ದಿನಕರ್ ಮಾತನಾಡಿ, ನಾಲ್ಕು ತಿಂಗಳಿಗೊಮ್ಮೆ ನಮ್ಮ ದೇಹದಲ್ಲಿ ತನ್ನಿಂದತಾನೇ ರಕ್ತ ನಶಿಸಿ ಹೋಗುತ್ತದೆ. ಅನಾವಶ್ಯಕವಾಗಿ ನಶಿಸಿ ಹೋಗುವ ರಕ್ತವನ್ನು ನಾಲ್ಕು ತಿಂಗಳಿಗೊಮ್ಮೆಯಾದರೂ ದಾನ ಮಾಡಿ. ನೀವು ನೀಡುವ ಒಂದು ಯುನಿಟ್ ರಕ್ತದಿಂದ ಮೂರು ಜನರ ಪ್ರಾಣ ಉಳಿಸಬಹುದು. ಹುಟ್ಟುಹಬ್ಬ, ಮದುವೆ ವಾರ್ಷಿಕೋತ್ಸವ ಮುಂತಾದ ಸಂದರ್ಭಗಳಲ್ಲಿ ಇಂತಹ ಮಹತ್ ಕಾರ್ಯ ಮಾಡಿ ಕೊನೆ ಪಕ್ಷ ಜೂನ್ 14 ರಂದು ವಿಶ್ವ ರಕ್ತ ದಾನಿಗಳ ದಿನದಂದಲಾದರೂ ರಕ್ತ ದಾನ ಮಾಡಿ ಎಂದರು.

ರಕ್ತ ದಾನ ಮಾಡುವ ಮೂಲಕ ಕುವೆಂಪು ವಿವಿ ಹಣಕಾಸು ಅಧಿಕಾರಿ ಪ್ರೊ. ಎಂ.ಬಿ. ಶಿವಣ್ಣ ಕಾರ್ಯಕ್ರಮ ಉದ್ಘಾಟಿಸಿದರು. ಡಾ. ಮಹಾಂತೇಶ್ ಕಂಬಾರ್ ಸ್ವಾಗತಿಸಿದರು. ಬಾಲಕೃಷ್ಣ ವಂದಿಸಿದರು. ಸತೀಶ್ ಕಾರ್ಯಕ್ರಮ ನಿರೂಪಿಸಿದರು. ಈ ಸಂದರ್ಭದಲ್ಲಿ ನೂರಾರು ಸ್ನಾತಕೋತ್ತರ ವಿದ್ಯಾರ್ಥಿ ಮತ್ತು ವಿದ್ಯಾರ್ಥಿನಿಯರುಗಳು ರಕ್ತದಾನ ಮಾಡಿದರು.

Vijaya Karnataka Page -02

# ಯುವ ದಲಿತರ ತಲ್ಲಣಗಳ ಚರ್ಚೆ ಆಗಲಿ

ವಿಕ ಚಿತ್ರಲೋಕ



ಶಿವಮೊಗ್ಗ ಕಮಲಾ ನೆಹರು ಕಾಲೇಜಿನಲ್ಲಿ ಗುರುವಾರ ಏರ್ಪಡಿಸಿದ್ದ ಕೃತಿ-ಮಾತು-ಸಂವಾದದಲ್ಲಿ ಲೇಖಕ ಟಿ.ಕೆ.ದಯಾನಂದ್ ಮಾತನಾಡಿದರು.

**ವಿಕ ಸುದ್ದಿಲೋಕ** ಶಿವಮೊಗ್ಗ

ಯುವ ದಲಿತ ತಲೆಮಾರಿನ ಪಲ್ಲಟ, ಮಾನಸಿಕ ಸ್ಥಿತಿಗತಿ, ಎದುರಿಸುತ್ತಿರುವ ಸವಾಲು, ಸಮಸ್ಯೆಗಳ ಬಗ್ಗೆ ಅಧ್ಯಯನದ ಅನಿವಾರ್ಯತೆಯಿದೆ ಎಂದು ಲೇಖಕ ಟಿ.ಕೆ.ದಯಾನಂದ ಅಭಿಪ್ರಾಯಪಟ್ಟರು.

ನಗರದ ಕಮಲಾ ನೆಹರು ಮಹಿಳಾ ಕಾಲೇಜಿನಲ್ಲಿ ಗುರುವಾರ ಅಹರ್ನಿಶಿ ಪ್ರಕಾಶನ ವತಿಯಿಂದ ಏರ್ಪಡಿಸಿದ್ದ ಕೃತಿ-ಮಾತು-ಸಂವಾದ ಕಾರ್ಯಕ್ರಮ ದಲ್ಲಿ 'ದಲಿತ ಹೊಸ ತಲೆಮಾರು ಎದುರಿ ಸುತ್ತಿರುವ ಸವಾಲುಗಳು' ವಿಷಯದ ಕುರಿತು ವಿಚಾರ ಮಂಡಿಸಿದರು.

ಇಲ್ಲಿವರೆಗೆ ನಡೆದ ಚಳವಳಿ, ಹೋರಾಟ ಗಳು ಯುವ ಸಮುದಾಯವನ್ನು ಸಜ್ಜುಗೊಳಿಸುವ ಪ್ರಯತ್ನ ಮಾಡಿಲ್ಲ, ಅಲ್ಲದೇ ಸರಕಾರಿ ದಲಿತ ನೌಕರರ ಯೂನಿಯನ್‌ಗೆ ನೀಡುತ್ತಿರುವಷ್ಟು ಪ್ರಾಶಸ್ತ್ಯವನ್ನು ಯುವ ಸಮುದಾಯಕ್ಕೆ ನೀಡುತ್ತಿಲ್ಲ, ಹೀಗಾಗಿಯೇ ದಶಕಗಳಿಂದ ಅವರ ತಲ್ಲಣಗಳು ಹಾಗೆಯೇ ಉಳಿದಿವೆ. ಅವರಿಗೆ ಹೇಳಿಕೊಳ್ಳಲಿಕ್ಕೆ ಸಾಕಷ್ಟು ವಿಷಯ, ನೋವುಗಳಿದ್ದು, ಅವಕಾಶ ವಿಲ್ಲದೇ ಅವುಗಳು ಹಿಂಸೆಗಳಾಗಿ ಮಾರ್ಪಾಡುತ್ತಿವೆ. ಹೀಗಾಗಿ ಅವರ ಮಾನಸಿಕ ಸ್ಥಿತಿಗತಿಗಳ ಬಗ್ಗೆ ಅಧ್ಯಯನ ನಡೆಸುವ ಅಗತ್ಯತೆಯಿದೆ. ಇದಕ್ಕೆ ಸರಕಾರವಾಗಲಿ, ಸಂಘಟನೆಗಳಾಗಿ ಅವರ ಮಾತುಗಳನ್ನು ಕೇಳಿಸಿಕೊಳ್ಳುವ ಪ್ರಯತ್ನ ಮಾಡಬೇಕು ಎಂದರು.

ಲೇಖಕ ವಿಜಯ್‌ಕುಮಾರ್ ಸಿಗರನ ಹಳ್ಳಿ ಮಾತನಾಡಿ, ಇಂದಿನ ಕಾಲಘಟ್ಟದಲ್ಲಿ ಅಸಮಾನತೆ, ಅಸ್ಪೃಶ್ಯತೆಯನ್ನು ಪ್ರಶ್ನೆ ಮಾಡುವವರನ್ನೆ ಅಸ್ಪೃಶ್ಯರನ್ನಾಗಿ ಕಾಣಲಾಗುತ್ತಿದೆ. ಹೀಗಾಗಿ ದಲಿತರು ಒಳಗೊಂಡಂತೆ ಅನೇಕ ಯುವಜನರು ಧ್ವನಿಯೆತ್ತಲು ಹಿಂದೇಟು ಹಾಕುತ್ತಿದ್ದಾರೆ. ಜತೆಗಿದ್ದವರು, ಸಮಾನ ಮನಸ್ಕರು ಕೂಡ ಇಂತಹ ಸಮಸ್ಯೆಗಳ ಬಗ್ಗೆ ಧ್ವನಿಯೆತ್ತಲು ಬಿಡದ ಪರಿಸ್ಥಿತಿ ನಿರ್ಮಾಣವಾಗುತ್ತಿದೆ ಎಂದರು.

'ವಿಜಯ ಕರ್ನಾಟಕ' ದಿಲ್ಲಿ ಪ್ರತಿನಿಧಿ ಡಿ. ಉಮಾಪತಿ ಅವರು ಟಿ.ಕೆ.ದಯಾ ನಂದ್ ಅವರ 'ರೆಕ್ಕೆಹಾವು' ಹಾಗೂ ವಿಜಯಕುಮಾರ್ ಸಿಗರನಹಳ್ಳಿ ಅವರ 'ಬೂದಿಯಾಗದ ಕೆಂಡ' ಕೃತಿಗಳ ಬಗ್ಗೆ ಮಾತನಾಡಿದರು. ಶೋಷಿತರ, ಹಿಂದುಳಿ ದವರ ಧ್ವನಿಗಳು ಅಡಗಿ ಹೋಗುತ್ತಿರುವ ಹಾಗೂ ರಾಜ ಕೀಯ, ಸಾಮಾಜಿಕವಾಗಿ ನೊಂದವರ್ಗ ಹತಾಶರಾಗಿ ರುವ ಇಂದಿನ ಸಂದರ್ಭದಲ್ಲಿ ಇಂತಹ ಯುವ ಲೇಖ ಕರ ರಣಧೀರ ಪಡೆ ಬರುತ್ತಿರುವುದು ಆರೋಗ್ಯಕರ ಬೆಳವಣಿಗೆ. ಈ ಇಬ್ಬರೂ ಲೇಖಕರು ದಲಿತರು, ಹಿಂದುಳಿದವರು, ಅಸ್ಪೃಶ್ಯರು ಎದುರಿಸುತ್ತಿರುವ ಸಮಸ್ಯೆ ಗಳನ್ನು, ನೈಜ ಘಟನೆಗಳನ್ನು ಲೇಖನಿ ಮೂಲಕ ತೆರೆದಿಟ್ಟಿದ್ದಾರೆ. ಮುಖ್ಯ ವಾಹಿನಿಗಳು ಧ್ವನಿ ಸತ್ತಂತಿರುವ ಸಮಯ ದಲ್ಲಿ ಈ ಕೃತಿಗಳು ಸಮಾಜದ ಕಣ್ಣು ತೆರೆಸುತ್ತಿವೆ ಎಂದರು.

ಕುವೆಂಪು ವಿವಿ ಕುಲಪತಿ ಪ್ರೊ.ಜೋಗನ್ ಶಂಕರ್ ಅಧ್ಯಕ್ಷತೆ ವಹಿಸಿ ಮಾತನಾಡಿ, ದಲಿತರು ಹಾಗೂ ಮೇಲ್ವರ್ಗದವರ ನಡುವೆ ಇಂದಿಗೂ ಅಜಗಜಾಂತ ರವಿದೆ. ಇಂತಹ ಕೃತಿಗಳು ಮೇಲ್ನೋಟಕ್ಕೆ ದುಃಖವನ್ನು ವ್ಯಕ್ತಪಡಿಸಿ ದಂತೆ ಕಂಡುಬಂದರೂ ಅದರಲ್ಲಿ ಪ್ರತಿ ರೋಧವನ್ನು ವಿವರಿಸಿದ್ದಾರೆ ಎನ್ನುವುದನ್ನು ಮನಗಾಣಬೇಕು ಎಂದರು. ಸಂವಾದದಲ್ಲಿ ಪುಸ್ತಕ ಪ್ರೇಮಿಗಳು, ಲೇಖಕರು, ವಿದ್ಯಾರ್ಥಿಗಳು ಪಾಲ್ಗೊಂಡು ಚರ್ಚಿಸಿದರು. ಅಹರ್ನಿಶಿ ಪ್ರಕಾಶನದ ಪ್ರಕಾಶಕಿ ಅಕ್ಷತಾ ಹುಂಚದಕಟ್ಟೆ ಮತ್ತಿತರರಿದ್ದರು.

# ಸಂತಾಪ

**ಶಂಕರಘಟ್ಟ:** ಹಿಮಾಲಯದ ಸಿಯಾಚಿನ್ ಕಣಿವೆಯ ಇತ್ತೀಚೆಗೆ ನಡೆದ ದುರ್ಘಟನೆಯಲ್ಲಿ ರಾಜ್ಯದ ಯೋಧರು ಮೃತಪಟ್ಟ ಹಿನ್ನೆಲೆಯಲ್ಲಿ ಕುವೆಂಪು ವಿವಿಯಲ್ಲಿ ಗುರುವಾರ ಸಂತಾಪ ಸೂಚಕ ಸಭೆ ನಡೆಸಿ ಮೃತರ ಆತ್ಮಕ್ಕೆ ಶಾಂತಿ ಕೋರಲಾಯಿತು.

ಹಿಮರಾಶಿಯಲ್ಲಿ ಸಿಲುಕಿ ಪವಾಡಸದೃಶವಾಗಿ ಬದುಕುಳಿದು ಪಿತ್ತ ಜನಕಾಂಗ ಮತ್ತು ಕಿಡ್ನಿ ವೈಫಲ್ಯದಿಂದ ಮೃತಪಟ್ಟ ಲಾನ್ಸ್‌ನಾಯಕ್ ಹನುಮಂತಪ್ಪ ಕೊಪ್ಪದ, ಇದೇ ಘಟನೆಯಲ್ಲಿ ಮೃತರಾದ ಎಚ್.ಡಿ.ಕೋಟೆಯ ಹಂಪಾಪುರದ ಯೋಧ ಮಹೇಶ, ಹಾಸನ ಜಿಲ್ಲೆಯ ಟಿ.ಟಿ.ನಾಗೇಶ್ ಹಾಗೂ ಇವರೊಡನೆ ಮರಣವನ್ನಪ್ಪಿದ ಯೋಧರ ನಿಧನಕ್ಕೆ ಸಂತಾಪ ವ್ಯಕ್ತಪಡಿಸಲಾಯಿತು. ಕುಲಪತಿ ಪ್ರೊ.ಜೋಗನ್ ಶಂಕರ್, ಕುಲಸಚಿವ ಪ್ರೊ. ಜಿ.ಸೋಮಶೇಖರ್ ಮತ್ತು ಪ್ರೊ.ಸಿ.ಎಂ.ತ್ಯಾಗರಾಜ್, ಹಣಕಾಸು ಅಧಿಕಾರಿ ಪ್ರೊ.ಎಂ.ಬಿ.ಶಿವಣ್ಣ, ಅಧ್ಯಾಪಕೇತರ ನೌಕರರ ಸಂಘದ ಅಧ್ಯಕ್ಷ ಬಸವರಾಜ್ ಬಳಿಗಾರ ಹಾಗೂ ವಿವಿಯ ಅಧ್ಯಾಪಕ ಮತ್ತು ಅಧ್ಯಾಪಕೇತರ ನೌಕರರುಗಳು ಭಾಗವಹಿಸಿದ್ದರು.

# ಶೋಷಿತರ ನೋವುಗಳು ಸಾಹಿತ್ಯ ರೂಪದಲ್ಲಿ ಬರಲಿ

ಶಿವಮೊಗ್ಗ: ಶೋಷಿತರ ನೋವುಗಳನ್ನು ಪ್ರತಿನಿಧಿಸುವ ಸಾಹಿತ್ಯ ಕನ್ನಡದಲ್ಲಿ ಬಹಳ ಕಡಿಮೆ ಎಂದು ಕುವೆಂಪು ವಿಶ್ವವಿದ್ಯಾಲಯದ ಕುಲಪತಿ ಪ್ರೊ.ಜೋಗನ್ ಶಂಕರ್ ಅಭಿಪ್ರಾಯಪಟ್ಟರು. ನಗರದ ಕಮಲಾ ನೆಹರು ಕಾಲೇಜಿನಲ್ಲಿ ಅಹರ್ನಿಶಿ ಪ್ರಕಾಶನದ ವತಿಯಿಂದ ಕುವೆಂಪು ಸಭಾಂಗಣದಲ್ಲಿ ಕೃತಿ-ಮಾತು-ಸಂವಾದ ಕಾರ್ಯಕ್ರಮದಲ್ಲಿ ಅಧ್ಯಕ್ಷತೆ ವಹಿಸಿ ಮಾತನಾಡಿದರು. ದಲಿತರ ನೋವು, ಅವಮಾನ ಮತ್ತು ನಿರಾಕರಣೆಯನ್ನು ಮಹಾರಾಷ್ಟ್ರದ ಸಾಹಿತ್ಯದಲ್ಲಿ ಹೆಚ್ಚಾಗಿ ಕಾಣಬಹುದು. ಅಲ್ಲಿನ ಹೋರಾಟಗಾರರು ಸಾಹಿತ್ಯ ರೂಪದಲ್ಲಿ ದಾಖಲಿಸಿದರು. ಆದರೆ ಶೋಷಿತರ ಕುರಿತು ಕನ್ನಡದಲ್ಲಿ ಸಾಹಿತ್ಯ ರೂಪ ಕೊಡಲು ಸಾಧ್ಯವಾಗಿಲ್ಲ ಎಂದು ಹೇಳಿದರು. ಪತ್ರಕರ್ತ ಡಿ.ಉಮಾಪತಿ ಮಾತನಾಡಿ, ಶೋಷಿತರ ಪರವಾಗಿ ದನಿ ಎತ್ತುವವರ ಸದ್ದನ್ನು ಅಡಗಿಸುವ ಕಾರ್ಯವನ್ನು ಸಮಾಜ ಮಾಡುತ್ತಿದೆ ಎಂದರು. ಲೇಖಕ ದಯಾನಂದ, ವಿಜಯಕುಮಾರ, ವೆಂಕಟೇಶ್, ಮಂಜುಳಾ, ಅಕ್ಷತಾ, ಮಲ್ಲಿಕಾರ್ಜುನ ಮೇಟಿ, ನಾಗರಾಜ್ ಹಾಜರಿದ್ದರು.



ಕಮಲಾ ನೆಹರು ಕಾಲೇಜಿನಲ್ಲಿ ಕೃತಿ-ಮಾತು-ಸಂವಾದ ಕಾರ್ಯಕ್ರಮದಲ್ಲಿ ಕುವೆಂಪು ವಿವಿ ಕುಲಪತಿ ಪ್ರೊ.ಜೋಗನ್ ಶಂಕರ್.ಮಾತನಾಡಿದರು.

# Bangalore varsity's distance education courses may draw a blank this year, too

## No admissions last academic year as UGC derecognised programmes



**The UGC had derecognised courses of the department around six months back, following irregularities in getting approvals.** DH FILE PHOTO

**BENGALURU:** The distance education department of the Bangalore University might be staring at a second academic year without new admissions as the University Grants Commission (UGC) is yet to decide on the recognition of its courses.

The UGC had derecognised courses of the department around six months back, following irregularities in getting approvals.

Judging by the admissions for the year 2014-15, the department incurred an estimated loss of over Rs 1.5 crore during the inactive year (2015-16) owing to the freezing of admissions.

As many as 3,222 new admissions were made in 2014-15 and on an average, every student pays Rs 5,000 to Rs 6,000 for each of its courses, said Dr D Jeevan Kumar, in-charge director, Department of Correspondence Courses and Distance Education (DCC and DE). He was speaking to *Deccan Herald* on the sidelines of a press conference here on Thursday.

Time is running out for the department with admissions set to begin by the month of June. Kumar said: "No new admissions took place in 2015-16. This year too, we are worried as they have not given us any proper information on the status of the recognition of our courses. The vice-chancellor has been following up with the UGC every two months since the courses were derecognised. However, they have not given any satisfactory answer," said Kumar.

The department offers 10 courses. The UGC, however, decided to cancel them for not getting approvals for the years 2013, 2014 and 2015, according to Kumar.

"We honestly did not know about the approvals. My hunch is that the UGC is waiting for the matter to be settled in the Supreme Court," Kumar said.

Courses under the Karnataka State Open University (KSOU) in Mysuru were also derecognised for several irregularities. A committee has already visited the university and even compiled and submitted a report, said Kumar.

### Admission trends

| Year | Number |
|---|---|
| 2010 | 14,507 |
| 2011 | 10,557 |
| 2012 | 7,368 |
| 2013 | 4,939 |
| 2014 | 3,222 |

### Seminar from Saturday

A seminar on 'Prospects of Open and Distance Learning System' will be organised by the DCC&DE in collaboration with the Forum of Vice-Chancellors of Karnataka State Universities at Jnanajyothi auditorium 10 am onwards on February 13.

**Dwindling numbers**
Students' interest in distance courses of BU has drastically waned. Figures obtained from the department on admissions say it all.

**DH News Service**